# ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ ಇವರು ನಿಯಮ 72 ರಡಿಯಲ್ಲಿ ಗಮನ ಸೆಳೆಯುವ ಸೂಚನೆ

## ವಿಷಯ

2017-18ನೇ ಸಾಲಿನಲ್ಲಿ ನೇಮಕಗೊಂಡ ಸಹಾಯಕ ಪ್ರಾಧ್ಯಾಪಕರುಗಳಿಗೆ ಪತಿ-ಪತ್ನಿ ಪ್ರಕರಣದಡಿ ಸ್ಥಳ ಮಾರ್ಪಾಡು ಮಾಡಿಕೊಡಲು ಸರ್ಕಾರದ ಆದೇಶ ಸಂಖ್ಯೆ: ಇಡಿ 182 ಡಿಸಿಇ 2017, ದಿನಾಂಕ: 06.09.2017 ರಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಸದರಿ ಆದೇಶದ ಅನುಸಾರ 05 ಮಂದಿ ಪ್ರಾಧ್ಯಾಪಕರಿಗೆ ಸ್ಥಳ ಮಾರ್ಪಾಡು ಮಾಡಿ, ಉಳಿದ 130 ಮಂದಿ ಪ್ರಾಧ್ಯಾಪಕರುಗಳಿಗೆ ಅಗತ್ಯ ಬೋಧನ ಕಾರ್ಯಭಾರ ಇರುವ ಕಾಲೇಜುಗಳಿಗೆ ನಿಯೋಜನೆ/ ಅನ್ಯ ಕರ್ತವ್ಯದ ಮೇರೆಗೆ (ಓಓಡಿ) ನಿಯೋಜಿಸಲಾಯಿತು. ಆದರೆ, ಸದರಿ ನಿಯೋಜನೆಯನ್ನು ದಿನಾಂಕ:03.05.2022 ರಂದು ರದ್ದುಗೊಳಿಸಲಾಗಿರುತ್ತದೆ. ಇದರಿಂದ, ನಿಯೋಜನೆ/ ಓಓಡಿ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಾಧ್ಯಾಪಕರಿಗೆ ತೀವ್ರ ಅನಾನುಕೂಲವಾಗಿದೆ. ಪತಿ-ಪತ್ನಿ ಪ್ರಕರಣದಡಿ ಬರುವಂತಹ ನೌಕರರು ಕಡ್ಡಾಯವಾಗಿ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸಲೇಬೇಕಿರುವುದರಿಂದ ಪತಿ-ಪತ್ನಿ ಇಬ್ಬರು ಕೂಡ ಕುಟುಂಬದೊಂದಿಗೆ ಇರಲು-ಸ್ಪಂದಿಸಲು ಸಾಧ್ಯವಾಗುತ್ತಿಲ್ಲ. ಕುಟುಂಬಕ್ಕೆ-ಮಕ್ಕಳಿಗೆ ನ್ಯಾಯ ಒದಗಿಸಲು ಸಾಧ್ಯವಾಗುತ್ತಿಲ್ಲ.

ಹೆಣ್ಣು ಮಕ್ಕಳ ಸ್ಥಿತಿಯಂತೂ ಶೋಚನೀಯ. ಇವರ ವೃತ್ತಿ ಮತ್ತು ವೈಯಕ್ತಿಕ ಬದುಕು ವಿರುದ್ಧ ದಿಕ್ಕಿನಲ್ಲಿದೆ. ಏಕ ಕಾಲದಲ್ಲಿ ಎರಡೂ ಜವಾಬ್ದಾರಿಯನ್ನು ನಿಭಾಯಿಸಲಾಗದೆ ದೈಹಿಕ ಮತ್ತು ಮಾನಸಿಕ ಒತ್ತಡದಲ್ಲಿದ್ದಾರೆ. ಹಾಗಾಗಿ, ಸಹ ಪ್ರಾಧ್ಯಾಪಕರಿಗೆ ಮಾನವೀಯ ನೆಲೆಗಟ್ಟಿನಲ್ಲಿ ಸ್ಥಳ ಮಾರ್ಪಾಡು/ ಅದಾಲತ್/ ನಿಯೋಜನೆ ಮಾಡಿಕೊಡುವ ಮೂಲಕ ಅನುಕೂಲ ಮಾಡಿಕೊಡಬೇಕಿದೆ. ಈ ನಿಟ್ಟಿನಲ್ಲಿ ಮಾನ್ಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

## ಉತ್ತರ

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ವಿವಿಧ ಕಾರಣಗಳಿಗಾಗಿ 2017-18 ನೇ ಸಾಲಿನಲ್ಲಿ ನೇಮಕಗೊಂಡಿದ್ದ ಬೋಧಕರನ್ನೊಳಗೊಂಡಂತೆ ಹಲವು ಬೋಧಕರನ್ನು ಅವರ ಮೂಲ ಕಾರ್ಯಸ್ಥಾನಗಳಿಂದ ಅವರ ಕೋರಿಕೆಯ ಕಾಲೇಜುಗಳಿಗೆ ನಿಯೋಜನೆಯನ್ನು ಮಾಡಲಾಗಿತ್ತು. ಸದರಿ ಬೋಧಕರುಗಳ ನಿಯೋಜನೆಯಿಂದಾಗಿ ಗ್ರಾಮೀಣ ಪ್ರದೇಶದ ಸರ್ಕಾರಿ ಕಾಲೇಜುಗಳಲ್ಲಿ ಬೋಧಕರ ಕೊರತೆ ಉಂಟಾಗಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ತೊಂದರೆಯಾಗುತ್ತಿರುವುದಾಗಿ ವಿಧಾನಮಂಡಲದ ಅಧಿವೇಶನದ ಸಂದರ್ಭದಲ್ಲಿ ಪ್ರಸ್ತಾಪಿಸಿ ಸುದೀರ್ಘವಾದ ಚರ್ಚೆಯಾಗಿರುವ ಹಿನ್ನಲೆಯಲ್ಲಿ, ನಿಯೋಜನೆಯನ್ನು ರದ್ದುಗೊಳಿಸುವಂತೆ ವಿಧಾನಮಂಡಲದ ಅಧಿವೇಶನದಲ್ಲಿ ಹಲವಾರು ಜನಪ್ರತಿನಿಧಿಗಳು ನೀಡಿದ್ದ ಅಭಿಪ್ರಾಯದಂತೆ ಬೋಧಕರ ವರ್ಗಾವಣೆ ನಿಯಮಗಳಲ್ಲಿ ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ನಿಯೋಜನೆಗೆ ಇದ್ದಂತಹ ಅವಕಾಶಗಳನ್ನು ರದ್ದುಪಡಿಸಲಾಯಿತು.

2021ರ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಮಗಳಲ್ಲಿ ನಿಯೋಜನೆಗೆ ಅವಕಾಶವಿಲ್ಲದ ಪ್ರಯುಕ್ತ ದಿನಾಂಕ: 30.04.2022ರಲ್ಲಿ ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿನಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ 2017-18ನೇ ಸಾಲಿನಲ್ಲಿ ನೇಮಕಗೊಂಡಿದ್ದ ಬೋಧಕರನ್ನೊಳಗೊಂಡಂತೆ ಎಲ್ಲಾ ಬೋಧಕರುಗಳ ನಿಯೋಜನೆಯನ್ನು ರದ್ದುಪಡಿಸಿ ಮೂಲ ಕಾಲೇಜುಗಳಿಗೆ ಹಿಂತಿರುಗಿಸಿ ಆದೇಶಿಸಲಾಗಿರುತ್ತದೆ.

ಬೋಧಕರ ನಿಯೋಜನೆಗೆ ಪ್ರಮುಖ ಕಾರಣಗಳಾಗಿದ್ದ ಪತಿ-ಪತ್ನಿ/ ಗಂಭೀರ ವೈದ್ಯಕೀಯ ಕಾರಣಗಳು/ವಿಧವಾ/ಏಕ ಪೋಷಕರು/ ವಿಶೇಷ ಚೇತನರು (Persons with benchmark disability) ಪ್ರಕರಣಗಳಿಗೆ ಹೊಸದಾಗಿ ರೂಪಿಸಲಾದ ಬೋಧಕ ವರ್ಗಾವಣೆ ನಿಯಮಗಳಲ್ಲಿ ಈ ಕೆಳಕಂಡಂತೆ ಮೀಸಲಾತಿ ಮತ್ತು ಆದ್ಯತೆ ನೀಡಲಾಗಿದೆ.

| ಕ್ರ. ಸಂ. | ವಿವರಗಳು | ನಿಗದಿಪಡಿಸಿದ ಮಿತಿ ಮಂಜೂರಾದ ಹುದ್ದೆಯ ಶೇ. |
|---|---|---|
| 01 | Persons with Benchmark disabilities | 1 |
| 02 | Serious Ailments | 1 |
| 03 | Widow/ Single parent/ Woman Divorcee | 1 |
| 04 | Spouse Cases | 3 |
| | ಒಟ್ಟು | 6 |

ಪತಿ-ಪತ್ನಿ ಪ್ರಕರಣಗಳಿಗೆ ಮಂಜೂರಾದ ಹುದ್ದೆಯ ಶೇಕಡ 3 ರಷ್ಟು ಅವಕಾಶ ನೀಡಿದ್ದು ರಾಜ್ಯ ಅಥವಾ ಕೇಂದ್ರ ಸರ್ಕಾರಿ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳು ಅಥವಾ ಸರ್ಕಾರಿ ಸೌಮ್ಯದ ಸಾರ್ವಜನಿಕ ಉದ್ದಿಮೆಗಳ ಅಥವಾ ಸರ್ಕಾರಿ ಅನುದಾನಿತ ಸಂಸ್ಥೆಗಳ ಅನುದಾನಿತ ನೌಕರರು ಅಥವಾ ರಾಜ್ಯ ವಿಶ್ವವಿದ್ಯಾಲಯಗಳ ನೌಕರರನ್ನು ಪತಿ-ಪತ್ನಿ ಪ್ರಕರಣದಡಿ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತುತ, ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಿಸಲು ರೂಪಿಸಿರುವ ವರ್ಗಾವಣೆ ನಿಯಮಗಳಲ್ಲಿ ವಿಶೇಷ ಪ್ರಕರಣಗಳಿಗೆ ಶೇಕಡ 6ರಷ್ಟು ಮೀಸಲಾತಿ ಮತ್ತು ಆದ್ಯತೆ ನೀಡಿದ್ದು ವರ್ಗಾವಣೆಗಳನ್ನು ಪಾರದರ್ಶಕವಾಗಿ ಮತ್ತು ಜೇಷ್ಠತೆ ಆಧಾರದ ಮೇರೆಗೆ ಕೈಗೊಳ್ಳಲಾಗುವುದರಿಂದ ಪ್ರತಿಯೊಬ್ಬ ಬೋಧಕರಿಗೂ ಅವರ ಜೇಷ್ಠತೆ ಮತ್ತು ಕೋರಿಕೆಗಳಿಗನುಗುಣವಾಗಿ ಆನ್‌ಲೈನ್ ಕೌನ್ಸಲಿಂಗ್ ಮೂಲಕ ವರ್ಗಾವಣೆ ಪಡೆಯಲು ಅವಕಾಶ ನೀಡಲಾಗಿರುತ್ತದೆ.

**ಇಡಿ 231 ಡಿಸಿಇ 2022**

**(ಡಾ. ಅಶ್ವಥ್ ನಾರಾಯಣ ಸಿ.ಎನ್.)**
**ಉನ್ನತ ಶಿಕ್ಷಣ, ಐ.ಟಿ.-ಬಿ.ಟಿ.ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು**

C 82